ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1388 (1595)
ವಿಧಾನ ಪರಿಷತ್ತಿನ ಸದಸ್ಯರ ಹೆಸರು	:	ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	:	18-03-2021
ಉತ್ತರಿಸುವವರು	:	ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಪ್ರಧಾನ ಮಂತ್ರಿಯವರ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ರಾಷ್ಟ್ರೀಯ ಅಂಕಿ-ಅಂಶಗಳ ಅಭಿವೃದ್ಧಿ ಪರಿಷತ್‌ನಲ್ಲಿ ರಾಜ್ಯದಿಂದ ಯಾರು ಪ್ರತಿನಿಧಿಸುತ್ತಿದ್ದಾರೆ; (ಪೂರ್ಣ ವಿವರ ನೀಡುವುದು)	ಪ್ರಧಾನ ಮಂತ್ರಿಯವರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಅಂಕಿ-ಅಂಶಗಳ ಅಭಿವೃದ್ಧಿ ಪರಿಷತ್ ರಚನೆಯಾಗಿರುವುದಿಲ್ಲ. ಆದ್ದರಿಂದ ರಾಜ್ಯದಿಂದ ಪ್ರತಿನಿಧಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.
ಆ)	ರಾಷ್ಟ್ರೀಯ ಅಂಕಿ-ಅಂಶಗಳ ಆಯೋಗದಿಂದ ಅಂಕಿ-ಅಂಶ ಸಂಗ್ರಹಣೆ ಮತ್ತು ಸಮೀಕ್ಷೆ ಸಲುವಾಗಿ ರಾಜ್ಯ ಸರ್ಕಾರಕ್ಕೆ ಕಳೆದ 3 ವರ್ಷಗಳಲ್ಲಿ ಬಿಡುಗಡೆಯಾಗಿರುವ ಅನುದಾನವೆಷ್ಟು ಮತ್ತು ಈ ಅನುದಾನವನ್ನು ಯಾವ ಯಾವ ಕಾರ್ಯಕ್ರಮಗಳಿಗೆ ಬಳಸಲಾಗಿದೆ; (ವಿವರ ನೀಡುವುದು)	ಕಳೆದ 03 ವರ್ಷಗಳಲ್ಲಿ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.
ಇ)	ಅಖಿಲ ಭಾರತೀಯ ಸೇವೆಗಳಂತೆ ಪ್ರಸಕ್ತದಲ್ಲಿರುವ ಭಾರತೀಯ ಅಂಕಿ-ಅಂಶ ಸೇವೆ, ರಾಜ್ಯ ಅಂಕಿ-ಅಂಶಗಳ ಸೇವೆ ಮತ್ತು ಇತರೆ 'ಎ' ವರ್ಗದ ಸೇವೆಗಳನ್ನು ಒಟ್ಟುಗೂಡಿಸಿ, ಅಖಿಲ ಭಾರತೀಯ ಅಂಕಿ-ಅಂಶಗಳ ಸೇವೆಯನ್ನು ಸ್ಥಾಪಿಸುವ ಕೇಂದ್ರ ಸರ್ಕಾರದ ನಿರ್ಣಯಕ್ಕೆ ರಾಜ್ಯ ಸರ್ಕಾರ ಸಮ್ಮತಿಸಿದೆಯೇ? (ಪೂರ್ಣ ವಿವರ ನೀಡುವುದು)	ರಾಜ್ಯ ಅಂಕಿ-ಅಂಶಗಳ ಸೇವೆ ಮತ್ತು ಭಾರತೀಯ ಅಂಕಿ-ಅಂಶಗಳ ಸೇವೆಯಲ್ಲಿನ ವೃಂದಗಳ ಅಸಮತೋಲನವನ್ನು ಹಾಗೂ ರಾಜ್ಯ ಅಂಕಿ-ಅಂಶಗಳ ಸೇವೆಗಳ ಅಧಿಕಾರಿಗಳ ಹಿತಾಸಕ್ತಿಯನ್ನು ಗಣನೆಗೆ ತೆಗೆದುಕೊಂಡು ಅಖಿಲ ಭಾರತೀಯ ಅಂಕಿ-ಅಂಶಗಳ ಸೇವೆಯನ್ನು ಸ್ಥಾಪಿಸಬಹುದಾಗಿದೆ ಎಂದು ಕೇಂದ್ರ ಸರ್ಕಾರಕ್ಕೆ ದಿನಾಂಕ: 15.04.2013 ರಂದು ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.(ಪ್ರತಿ ಲಗತ್ತಿಸಿದೆ).

ಸಂಖ್ಯೆ: ಪಿಡಿಎಸ್ 44 ಎಸ್‌ಎಂಸಿ 2021

(ಡಾ: ನಾರಾಯಣಗೌಡ)
ಯುವ ಸಬಲೀಕರಣ ಮತ್ತು ಕ್ರೀಡೆ ಹಾಗೂ ಯೋಜನೆ,
ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು